ಕೆಲಸಗಳಾಗಬೇಕಾಗಿತ್ತು, ಆ ಕೆಲಸ ಆಗಿಲ್ಲವೆಂದು ಹೇಳಿದಾಗ, ಅದರ ಬಗ್ಗೆ ಎಗ್ಸಾಮಿನ್ ಮಾಡಿ ಈ ಹಂತದಲ್ಲಿ ಇಷ್ಟೊಂದು ಕೆಲಸವಾಗಬೇಕಾಗಿತ್ತು ಅಥವಾ ಇಷ್ಟು ತಿಂಗಳಲ್ಲಿ ಇಷ್ಟು ಪ್ರೋಗ್ರೆಸ್ ಆಗಬೇಕಾಗಿತ್ತು, ಆಗಿಲ್ಲವೆಂದು ಹೇಳಿ, ಒಂದು ದಿಕ್ಕಿನಲ್ಲಿ ಯೋಚಿಸಿ, ನೋಟೀಸ್ ಕೊಟ್ಟು, ಆ ಒಂದು ಪ್ರೋಗ್ರೆಸ್ ರಿಪೋರ್ಟ್ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳಿ ಎನ್ನುವ ಬಗ್ಗೆ ಕೂಡ ನಾನು ಸೂಚನೆ ಕೊಟ್ಟಿದ್ದೇನೆ. ಇದು ಬಹಳ ನಿಧಾನವಾಗಿದೆ. ಇದನ್ನು ನಾನು ಒಪ್ಪುತ್ತೇನೆ. ಆದರೆ, ಆದಷ್ಟು ಬೇಗನೆ ಇದನ್ನು ಕಟ್ಟಿ ಮುಗಿಸುವ ಪ್ರಯತ್ನ ಮಾಡುತ್ತೇನೆ. ಏಕೆಂದರೆ, ಒಂದ ಕಡೆ ಎಂ.ವೈ. ಪಾಟೀಲರ ಮತ ಕ್ಷೇತ್ರ, ಇನ್ನೊಂದು ಕಡೆ ಮಾನ್ಯ ಮುಖ್ಯಮಂತ್ರಿಯವರ ಮತ ಕ್ಷೇತ್ರ. ಮುಖ್ಯಮಂತ್ರಿಯವರಿಗೆ ಇವರಿಬ್ಬರಿಗೂ ಸಂಪರ್ಕ ಮಾಡಬೇಕಾದರೆ ಇದು ಬಹಳ ಅವಶ್ಯಕತೆ ಇದೆ. ಆದಷ್ಟು ಬೇಗ ಮಾಡಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : 13 ವರ್ಷಗಳಾಯಿತು. ಯಾದಗಿರಿಯಲ್ಲಿ 2 ವರ್ಷಗಳೊಳಗೆ ಬ್ಯಾರೇಜುಗಳನ್ನು ಮುಗಿಸಿದ್ದಾರೆ. ಆದರೆ, ಇಲ್ಲಿ 13 ವರ್ಷಗಳಾಯಿತು. ಮಾನ್ಯ ಖರ್ಗೆಯವರು ಸಮರ್ಥ ಆಡಳಿತಗಾರರಾಗಿದ್ದಾರೆ; ಆದರೆ, 13 ವರ್ಷ ನಾವು ಹೇಗೆ ತಾಳಿಕೊಂಡಿರಬಹುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ನಾನು ಹೇಳಿದೆ, ಅವರ ಕಾಲುಗುಣವೋ ನಮ್ಮ ಕಾಲುಗುಣವೋ ಗೊತ್ತಿಲ್ಲ. ಆ ಕಡೆ ಎಲ್ಲಾ ಮುಗಿದಿದೆ. ಇಲ್ಲಿ ಹೀಗಾಗಿದೆ. ಆದರೂ ಕೂಡ, ಮುಖ್ಯಮಂತ್ರಿಯವರು ಇದರ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಏಕೆಂದರೆ, ಅವರ ಮತಕ್ಷೇತ್ರಕ್ಕೆ ಹೋಗುವುದಕ್ಕೆ ಹೆಚ್ಚು ಕಡಿಮೆ 20 ಕಿ.ಮೀ. ಕಡಿಮೆಯಾಗುತ್ತದೆ. ಅದಕ್ಕಾಗಿ ಆದಷ್ಟು ಬೇಗ ಇದನ್ನು ಪೂರೈಸುವ ಕೆಲಸ ಮಾಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : 13 ವರ್ಷ ಕೆಲಸ ಮಾಡಿಲ್ಲವೆಂದಾದರೆ, ಗುತ್ತಿಗೆದಾರರನ್ನು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಇಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬ್ಲ್ಯಾಕ್‌ಲಿಸ್ಟ್‌ಗೆ ಹೋಗಲೆಂದು ನಿಮ್ಮ ಉದ್ದೇಶವಿದೆ. ಆದರೆ ತಮಗೆ ಗೊತ್ತಿದ್ದ ಹಾಗೆ, ಇದಕ್ಕೆ ಹಣವಿರಲಿಲ್ಲ. ನಾನು ಇದನ್ನು ನಬಾರ್ಡಿನಲ್ಲಿ ಸೇರಿಸಿ, ಹಣವನ್ನು ಸಂಪೂರ್ಣವಾಗಿ ಒದಗಿಸಿಕೊಟ್ಟಿದ್ದೇನೆ. ಆದರೆ, ಆದಷ್ಟು ಬೇಗ ಮಾಡಬೇಕೆಂದು ಹೇಳಿ ನಮ್ಮ ಪ್ರಯತ್ನವಿದೆ. ಒಂದು ವೇಳೆ ಮಾಡದೇ ಹೋದರೆ ಡೆಫಿನೆಟ್‌ಲಿ, ಬ್ಲ್ಯಾಕ್‌ಲಿಸ್ಟ್‌ಗೆ ಸೇರಿಸಿ, ಹೊಸ ಟೆಂಡರ್ ಕಾಲ್-ಫಾರ್ ಮಾಡಿ, ಬೇರೆಯವರಿಗೆ ಒಪ್ಪಿಸೋಣ.

ಬೆಳ್ತಂಗಡಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳು

33 (118): ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವುಗಳ ದುರಸ್ತಿಗೆ ಕೈಗೊಂಡ ಕ್ರಮಗಳೇನು;

ಇ) ಸಂಚಾರಕ್ಕೆ ಅನಾನುಕೂಲ ಪರಿಸ್ಥಿತಿಯಲ್ಲಿರುವ ಬೆಳ್ತಂಗಡಿ-ಬಂಗಾಡಿ-ಕಿಲ್ಲೂರು-ಕಾಜೂರು ರಸ್ತೆ, ಉಜಿರೆ-ಚಾರ್ಮಾಡಿ ಘಾಟಿ ರಸ್ತೆ, ಉಪ್ಪಿನಂಗಡಿ-ಗುರುವಾಯನಕೆರೆ ರಸ್ತೆ-

ಮಡಂತ್ಯಾರ–ಬಳ್ಳಮಂಜ–ಕಲ್ಲೇರಿ ರಸ್ತೆ, ಧರ್ಮಸ್ಥಳ–ಪೆರಿಯಡ್ಕ–ತೋಟತ್ತಾಡಿ–ಕಿಕ್ಕಿಂಜಿ ರಸ್ತೆ–ನಿಡ್ಲೆ–ಕಾರ್ಯತಡ್ಕ–ಪದುಬೆಟ್ಟು–ನೆರಿಯಾ ರಸ್ತೆ, ವೇಣೂರು–ಅಂಡಿಂಜೆ–ನಾರಾವಿ ರಸ್ತೆಗಳನ್ನು ಮರುಡಾಂಬರೀಕರಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿರಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಇತ್ತೀಚಿನ ಭಾರಿ ಮಳೆಯಿಂದ ತಾಲ್ಲೂಕಿನ ಕೆಲವು ಭಾಗದ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇ) ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗುವುದು ಇದಲ್ಲದೆ ಡಾಂಬರೀಕರಣದ ಕಾಮಗಾರಿಯನ್ನು ಅನುದಾನ ಲಭ್ಯತೆಯನ್ನಾಧರಿಸಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೆ. ಪ್ರಭಾಕರ ಬಂಗೇರ : ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಭಾರೀ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ತುಂಬಾ ರಸ್ತೆಗಳು ನಾದುರಸ್ತಿಯಲ್ಲಿವೆ. ಗುಂಡಿ ಮುಚ್ಚುವ ಕಾರ್ಯಕ್ರಮಕ್ಕೆ ಕೂಡ ಟೆಂಡರ್ ಕರೆದಿದ್ದಾರೆ. ಪಾರದರ್ಶಕ ಎಂಬ ವಿಚಾರದಲ್ಲಿ 30 ಸಾವಿರದಿಂದ 1 ಲಕ್ಷ ರೂಪಾಯಿಗಳವರೆಗೆ ಕೂಡ ಟೆಂಡರ್ ಕರೆದಿರುವುದರಿಂದ ಅಲ್ಲಿ ತುಂಬಾ ತೊಂದರೆಗಳಾಗುತ್ತವೆ. ಟೆಂಡರ್ ಕರೆದು, ಟೆಂಡರ್ ಫೈನಲೈಜ್‌ನಲ್ಲಿದ್ದಾಗ ಗುಂಡಿಗಳು ಒಂದಿದ್ದದ್ದು ಮೂರು ಆಗುವ ಸಂಭವ ಜಾಸ್ತಿಯಿರುವುದರಿಂದ, ನಾನು ತಮ್ಮ ಮೂಲಕ ವಿನಂತಿಸುತ್ತೇನೆ, 2 ಲಕ್ಷ ರೂಪಾಯಿಗಳವರೆಗಿನ ಕಾಮಗಾರಿಗಳನ್ನು ಟೆಂಡರ್ ಇಲ್ಲದೆ, ಆ ಇಲಾಖೆಯವರೇ ಮಾಡಿದರೆ ಆದಷ್ಟು ಶೀಘ್ರದಲ್ಲಿ ಕೆಲಸಗಳು ಆಗುತ್ತವೆ. ಎರಡನೆಯದಾಗಿ, ನಮ್ಮ ಕ್ಷೇತ್ರದಲ್ಲಿ ಕಡೂರು – ಮಂಗಳೂರು ರಸ್ತೆ ನಾದುರಸ್ತಿಯಲ್ಲಿರುವ ರಸ್ತೆಗಳಾಗಿವೆ. ನಮ್ಮ ಚಾರ್ಮಾಡಿ ಘಾಟ್‌ನಿಂದ ಉಜಿರವರೆಗಿನ ರಸ್ತೆ ತುಂಬಾ ಗುಂಡಿಗಳಿರುವುದರಿಂದ, ಈಗಾಗಲೇ ನಾನು ಕೆಲವು ಸಲ ಮನವಿಗಳನ್ನು ಮಾಡಿದ್ದರೂ ಕೂಡ, ಆ ರಸ್ತೆಗಳು ದುರಸ್ತಿಯಾಗದೆ, ಡಾಂಬರೀಕರಣವಾಗದೇ, ಸುಮಾರು 30 ವರ್ಷಗಳಾಯಿತು. ಡಾಂಬರೀಕರಣ ಆಗುವುದಕ್ಕೆ ನನ್ನ ಕ್ಷೇತ್ರದಲ್ಲಿರುವ 3–4 ರಸ್ತೆಗಳನ್ನು ಮುಖ್ಯವಾಗಿ ಕೊಟ್ಟಿದ್ದೇನೆ ಅವು ಯಾವುವೆಂದರೆ, ಬೆಳ್ತಂಗಡಿ–ಬಂಗಾಡಿ–ಕಿಲ್ಲೂರು, ಉಪ್ಪಿನಂಗಡಿ–ಗುರುವಾಯನಕೆರೆ ಮತ್ತು ವೇಣೂರು–ಅಂಡಿಂಜೆ ರಸ್ತೆಗಳನ್ನು ಯಾವಾಗ ಡಾಂಬರೀಕರಣ ಮಾಡುತ್ತೀರಿ? ತಾವು, ಅನುದಾನದ ಕೊರತೆ ಇದೆ, ಅನುದಾನಕ್ಕೆ ಅನುಸಾರವಾಗಿ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಈ ಬಜೆಟ್‌ನಲ್ಲಿ ಈ ರಸ್ತೆಗಳಿಗೆ ಹಣವನ್ನು ಒದಗಿಸಿದ್ದೀರಾ? ಎಂಬುದನ್ನು ತಿಳಿಸಬೇಕಾಗಿ ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳಲು ಇಚ್ಛಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ, ಈಗ ಗುಂಡಿ ಮುಚ್ಚುವ ಬಗ್ಗೆ, ನಾವು ಈಗಾಗಲೇ ಶಾರ್ಟ್ ಟರ್ಮ್ ಟೆಂಡರ್ ಕರೆದಿದ್ದೇವೆ. ಕೆಲವು ಕಡೆ ಏನಾದರೂ ಶಾರ್ಟ್ ಟರ್ಮ್ ಟೆಂಡರ್ ಬರದೇ ಹೋದರೆ, ಅದನ್ನು ಪರಿಶೀಲಿಸಿ, ಕಾನೂನು ರೀತಿ

ಏನು ಮಾಡಬೇಕೋ ಅದನ್ನು ಅತೀ ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಎರಡನೆಯದಾಗಿ, ತಾವು ಏನು ಪ್ರಶ್ನೆ ಕೇಳಿದಿರಿ, ಅದಕ್ಕೆ ನಮ್ಮ ಹಣದ ಲಭ್ಯತೆಯನ್ನು ನೋಡಿ ಕೆಲಸ ಮಾಡಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ ಬಂಗೇರ : ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೇ, ಈ ವರ್ಷವೇ ಈ ರಸ್ತೆಗಳು ಆಗದೇ ಇದ್ದಾಗ ಖಂಡಿತವಾಗಲೂ ರಸ್ತೆಗಳಲ್ಲಿ ಮೋಟಾರಗಳಾಗಲಿ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಯಲ್ಲಿ ಈಗಾಗಲೇ ತಮಗೆ ಗೊತ್ತಿರುವ ಹಾಗೆ ಚಿಕ್ಕಮಗಳೂರು ಕಡೆಯಿಂದ ಬರುವಂಥ ವಾಹನಗಳು, ಇವರ ಪ್ರಕಾರ ಧಾರಣ ಶಕ್ತಿ 20 ಟನ್ ಕೆಪ್ಯಾಸಿಟಿ ಇದ್ದರೂ ಈಗಾಗಲೇ ಆ ರಸ್ತೆಗಳಲ್ಲಿ 40 ರಿಂದ 50 ಟನ್ ತುಂಬಿಸಿಕೊಂಡು ಲಾರಿಗಳು ಬರುತ್ತಿವೆ. ಅದನ್ನು ನಿಲ್ಲಿಸುವಂಥ ಕಾರ್ಯಗಳು ಕೂಡ ಮಾಡದೇ ಇರುವುದರಿಂದ ರಸ್ತೆಗಳು ಇನ್ನೂ ಕೂಡ ನಾದುರಸ್ಥಿತಿ ಹೋಗುತ್ತದೆ. ಇದರ ಬಗ್ಗೆ ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ನನಗೆ ತಿಳಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಪರಿಶೀಲಿಸಿ ಅತಿ ಶೀಘ್ರದಲ್ಲಿ ವಾಹನಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನಾವು ಕೆಲಸ ಮಾಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಪ್ರಕಾಶ್ ಖಂಡ್ರೆಯವರು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈಗ ರಸ್ತೆ ಗುಂಡಿಗಳು ರಸ್ತೆಯ ಹಿಂಗು ಗುಂಡಿಗಳಾಗಿವೆ.

ಅಧ್ಯಕ್ಷರು : ಮಾನ್ಯ ಸದಸ್ಯರ ಸಲಹೆಯ ಮೇಲೆ ಅವರು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಅರಗ ಜ್ಞಾನೇಂದ್ರ : ಸ್ಟೇಟ್ ಹೈವೇ ಬಗ್ಗೆ ಏನು ಮಾಡಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಶಾರ್ಟ್ ಟರ್ಮ್ ಟೆಂಡರ್ ಕರೆದಿದ್ದರು, ಸ್ಟೇಟ್ ಹೈವೇಯದ್ದು ಏನೂ ಮಾಡುತ್ತಿಲ್ಲ. ರಾಜ್ಯ ಹೆದ್ದಾರಿ ಮೊನ್ನೆ ಮುಗಿದು ಹೋಗಿದೆ. ರಾಜ್ಯ ಹೆದ್ದಾರಿದ್ದು ಸ್ಟಾರ್ ಇದು ನಿಮ್ಮ ಕ್ಷೇತ್ರಕ್ಕೂ ಬರುತ್ತದೆ. ಅವು ಅನಾಥವಾಗಿವೆ. ನಾವು ಅಧಿವೇಶನ ಮುಗಿಸಿ ಊರಿಗೆ ಹೋಗುವ ಹಾಗೆ ಇಲ್ಲ. ರಾಜ್ಯ ಹೆದ್ದಾರಿ ಗುಂಡಿ ಬಿದ್ದಿವೆ. ಅದಕ್ಕೆ ಟೆಂಡರ್ ಕರೆಯಲಿಲ್ಲ. ಅದಕ್ಕೆ ಏನಾದರೂ ಮುಕ್ತಿ ಮಾಡುತ್ತಾರಾ?

ಅಧ್ಯಕ್ಷರು : ಅವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮುಂದಿನ ಪ್ರಶ್ನೆ ಕೇಳಿ. ಮಾನ್ಯ ಪ್ರಕಾಶ್ ಖಂಡ್ರೆಯವರೆ ಕೇಳಿ.

ಬೀದರ್ ಜಿಲ್ಲೆಯ ಕಾರಂಜಾ ಯೋಜನೆ

34 (357): ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯನ್ನು Fast track (AIBP) ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಬೇಕೆಂದು ನಿಗಧಿ ಪಡಿಸಲಾಗಿದೆ.